# ನಾಳಿನ ಬಿಂಬ

ಚಿತ್ರಪಟದ ತುಂಬಾ
ನಾಳೆಗಳ ಪ್ರತಿಬಿಂಬ
ನಿನ್ನೆಗಳ ನೆರಳೂ ಚಾಚಿದೆ
ಅಂಟಿದೆ ಭೂತ, ಭವಿಷ್ಯದ ಕಾಲಿಗೆ

ಅಸ್ಪಷ್ಟ ನಿಲುವಿಗೆ
ಚಲನೆಯ ಪ್ರತಿಬಿಂಬ
ಗಾಜಿನ ಮನೆಯಲ್ಲಿ ನಿಂತು
ಮುಗಿಲೆತ್ತರಕ್ಕೆ ಬೆತ್ತಲಾಗಿ
ಕಾಲನ ಕೈಯೊಳಗೆ ಕಲ್ಲಾಗಿ

ಹೊಳೆಸಬಹುದೇ
ಕನ್ನಡಿಯ ಬಿಂಬ
ದಿಕ್ಕುಗಳ ವೈರುಧ್ಯ?
ಅನುಗಾಲವೂ ಬಿಂಬಗಳು
ಸಂಧಿಸುವ ಸಂಧಿಕಾಲ
ಕಾಲುಗಳು ಸಾಗಿವೆ
ನಾಳಿನ ಬಾಳಿನೆಡೆಗೆ

ಕಾಣದ ನೆರಳುಗಳು
ಇಡುವ ಹೆಜ್ಜೆಗಳ ಕೆಳಗೆ

**• ರಂಗನಾಥ್ ಕ್ಯಾತನಹಳ್ಳಿ**



# ಪ್ರತಿರೂಪಗಳು

ಗಾಜಿನ ಕಿಟಕಿಯಾಚೆ
ನೀಲಿ ನಭದೊಳಗೆ
ಬಿಳಿಮುಗಿಲುಗಳ ಸಾಲು
ಎತ್ತಲೋ ಸಂಚಾರಕ್ಕೆ ಹೊರಟಿರುವ
ಪ್ರತಿಬಿಂಬದಲಿ ಈ
ಚೆಲುವೆಯರದೇ ಮೆರವಣಿಗೆ

ಗಾಜಿನ ಕಿಟಕಿಯೊಳಗೆ
ಒಂದರ ಬೆನ್ನಿಗೆ ಮತ್ತೊಂದು
ವಿರುದ್ಧ ದಿಕ್ಕುಗಳಲ್ಲಿ ಕೂತಿವೆ
ಮುಖ ತಿರುಗಿಸಿದ ಕುರ್ಚಿಗಳು
ಅದರ ಪ್ರತಿಬಿಂಬಗಳು
ಹಾರುವ ಕಪ್ಪು ಹಕ್ಕಿಗಳ
ಚಿತ್ತಾರ ಬರೆದಂತಿದೆ...

ಗಾಜಿನ ಕಿಟಕಿಯೊಳಗೆ
ಚಹರೆ ಇಲ್ಲದ ಮನುಷ್ಯ
ಎತ್ತಲೋ ನಡೆದಿರುವನು
ಅವನ ಪ್ರತಿಬಿಂಬ
ಅದಕೆ ವಿರುದ್ಧವಾಗಿ ತನ್ನ
ಬಲ ಕೈಯನ್ನು ಹಿಂದಿಟ್ಟು
ಎಡಕಾಲನ್ನು ಮುಂದಿಟ್ಟು
ಎತ್ತಲೋ ಚಲಿಸಿದಂತಿದೆ

ಒಳ ಹೊರಗಿನ ಪ್ರತಿರೂಪಗಳು
ಅವುಗಳ ಪ್ರತಿಬಿಂಬಗಳು
ಒಂದನ್ನೊಂದು ಹೋಲುತಿವೆ
ಅವು ಅವೇ ಆಗಿವೆ.
ಸನಿಹವಿದ್ದರೂ ದೂರ
ದೂರವಿದ್ದರೂ ಸನಿಹ
ಜೋಡಿಯಾದರೂ
ಜೊತೆಗೇ ಇದ್ದರೂ ಏಕಾಂಗಿ
ಅವಕ್ಕೆ ಸದಾ ಹಲವು ಭಂಗಿ

**• ರಂಜಿತಾ ಎಂ.**